◆ ನಿಮ್ಮ ಬಾಲ್ಯ, ಶಿಕ್ಷಣ ಮತ್ತು ನೀವು ಬೆಳೆದ ಪರಿಸರ ಹೇಗಿತ್ತು?

ನಾನು ಹುಟ್ಟಿದ್ದು ಬೆಳಗಾವಿಯಲ್ಲಿ. ನನ್ನ ಶಾಲಾ ಶಿಕ್ಷಣ ನಡೆದದ್ದು ಉತ್ತರ ಕನ್ನಡದ ಸಿದ್ದಾಪುರದಲ್ಲಿ. ನನ್ನ ಬಾಲ್ಯ ಅಷ್ಟು ಸುಖಮಯವಾಗಿರಲಿಲ್ಲ. ನಾನು ತಾಯಿಯನ್ನು ಎಳೆಯ ವಯಸ್ಸಿನಲ್ಲಿಯೇ ಕಳೆದುಕೊಂಡೆ. ಮನೆಯಲ್ಲಿ ಮಲತಾಯಿ ಮತ್ತು ಅಜ್ಜಿ ಇದ್ದರು. ನನ್ನ ತಂದೆ ಯಕ್ಷಗಾನ ಪಟುವಾಗಿದ್ದರಿಂದ ಅವರು ಮನೆಯಲ್ಲಿ ಇರುತ್ತಿದ್ದುದೇ ಕಡಿಮೆ. ಅವರು ಯಕ್ಷಗಾನ ಕಲಾವಿದರಾಗಿ ರಂಗದ ಮೇಲೆ ಕಾಣಿಸಿಕೊಳ್ಳುತಿದ್ದರಲ್ಲದೆ ಕೆಲವು ಯಕ್ಷಗಾನ ಪ್ರಸಂಗಗಳನ್ನು ಬರೆದು ಲೇಖಕರಾಗಿಯೂ ಗುರುತಿಸಿಕೊಂಡಿದ್ದರು. ಅವರ ಹೆಸರು ಮಂಜುನಾಥ ಶಾನಭಾಗ. ಸಾಹಿತ್ಯ ಚರಿತ್ರೆ ಗ್ರಂಥದಲ್ಲಿ ಅವರ ಹೆಸರಿನ ಉಲ್ಲೇಖವಿದೆ. ಶಾನಭಾಗ ಎನ್ನುವುದು ಕೊಂಕಣಿ ಭಾಷಿಕ ಗೌಡ ಸಾರಸ್ವತರ ಒಂದು ಅಡ್ಡಹೆಸರು. ಇದನ್ನು ಶೆಣವಿ, ಶೆಣೈ, ಶ್ಯಾನುಭೋಗ ಇತ್ಯಾದಿಯಾಗಿ ಬಳಸುವ ಕ್ರಮ ಇದೆ. ದಂತಕಥೆಯ ಆಧಾರದಲ್ಲಿ ಹೇಳುವುದಾದರೆ ಪರಶುರಾಮನು ಉತ್ತರ ಭಾರತದಿಂದ ಕರೆತಂದ ಸಾರಸ್ವತ ಬ್ರಾಹ್ಮಣರಿಗೆ ಶೆಣಾವಿ ಅಂದರೆ 96 ಗ್ರಾಮಗಳನ್ನು ನೀಡಿ ಗೋಮಾಂತಕದಲ್ಲಿ (ಇಂದಿನ ಗೋವಾ) ನೆಲೆಗೊಳಿಸಿದನಂತೆ. ಆ ಹಿನ್ನೆಲೆಯಿಂದ ಈ ಗ್ರಾಮ ನಿವಾಸಿಗಳನ್ನು ಶೆಣವಿಗಳೆಂದು ಗುರುತಿಸಲಾಗುತ್ತಿತ್ತು.

ನನ್ನ ಬಾಲ್ಯ ಕಳೆದ ಉತ್ತರ ಕನ್ನಡ ಜಿಲ್ಲೆಯ ಪರಿಸರದಲ್ಲಿ ಆಗ ಯಕ್ಷಗಾನ ಕಲೆ ಬಹಳ ಜನಪ್ರಿಯವಾಗಿತ್ತು. ನಾವು ಮಕ್ಕಳಂತೂ ಯಕ್ಷಗಾನ ಪ್ರದರ್ಶನಗಳನ್ನು ದಿನನಿತ್ಯವೆಂಬಂತೆ ನೋಡಿ ಅದರಲ್ಲಿ ಒಲವು ಬೆಳೆಸಿಕೊಂಡೇ ಬೆಳೆದೆವು ಎಂದು ಹೇಳಬಹುದು. ಮನೆಯಲ್ಲಿ ಸ್ವತಃ ತಂದೆಯೇ ಯಕ್ಷಗಾನ ಕಲಾವಿದರಾಗಿದ್ದರಿಂದ ನನಗೆ ಅದರಲ್ಲಿ ಹೆಚ್ಚಿನ ಆಕರ್ಷಣೆ ಇತ್ತು. ಆಗ ಊರೂರು ಮೊಕ್ಕಾಂ ಹೂಡುತ್ತಿದ್ದ ಕಂಪನಿ ನಾಟಕಗಳನ್ನೂ ನೋಡುತ್ತಿದ್ದೆ. ಶಾಲೆಯಲ್ಲಿ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದೆ.

◆ ಶಿಕ್ಷಕ ವೃತ್ತಿ ನಿಮ್ಮ ಆಯ್ಕೆಯಾಗಿತ್ತೇ?

ಇಂದಿನ ಯುಗದ ಇಲೆಕ್ಟ್ರಾನಿಕ್ ಸಾಧನಗಳು ಉಪಲಬ್ಧವಿಲ್ಲದ ಆ ದಿನಗಳಲ್ಲಿ ಯಕ್ಷಗಾನ ಮತ್ತು ನಾಟಕಗಳು ಜನಸಾಮಾನ್ಯರಿಗೆ ಕಾಲ ಕಳೆಯುವ ಮನರಂಜನಾ ಸಾಧನಗಳಾಗಿದ್ದರಿಂದ ಹದಿಹರೆಯದ ವಯಸ್ಸಿನಲ್ಲಿ ನಾನು ರಂಗಾಭಿನಯದಲ್ಲಿ ಆಸಕ್ತಿ ತಳೆದು ನಾಟಕ ಕಂಪನಿ ಸೇರುವ ಕನಸು ಕಾಣುತ್ತಿದ್ದೆ. ನನ್ನ ಈ ಬಯಕೆಗೆ ಒತ್ತಾಸೆಯಾಗಿದ್ದವನು ನನ್ನ ಸ್ನೇಹಿತ ಶ್ರೀಧರ ಗುಡಿಮನೆ. ನಾವಿಬ್ಬರು ಮನೆಯಿಂದ ಓಡಿ ಹೋಗಿ ನಾಟಕ ಕಂಪನಿ ಸೇರುವುದೆಂದು ನಿರ್ಧರಿಸಿದ್ದೆವು. ಆದರೆ ನನ್ನ ಈ ನಿರ್ಧಾರಕ್ಕೆ ಮನೆಯಲ್ಲಿ ಚಿಕ್ಕಮ್ಮ ಬೆಂಬಲ ನೀಡುವುದಿಲ್ಲವೆಂದು ಗೊತ್ತಿತ್ತು. ನನ್ನ ಬಳಿ ಕವಡೆ ಕಾಸಿರಲಿಲ್ಲ. ಏನು ಮಾಡಲಿ ಎಂಬ ಅಸಹಾಯಕತೆಯ ಒತ್ತಡದಲ್ಲಿ ಬಿಡುಗಡೆ ರೂಪವಾಗಿ ನನಗೆ ಜ್ವರ ಬಂತು. ಅದು ಹತ್ತು ಹನ್ನೆರಡು ದಿನಗಳವರೆಗೆ ಕಾಡಿಸಿದ ಜ್ವರ. ನಾನು ಹಾಸಿಗೆಗೆ ಅಂಟಿಕೊಂಡು ಮಲಗಿದ್ದಾಗ ಸಮಯ ಕಳೆಯಲು ಅ.ನ.ಕೃ. ಅವರ 'ನಟಸಾರ್ವಭೌಮ' ಕಾದಂಬರಿ ಓದಿದೆ. ಸುಮಾರು ಎಂಟು ನೂರು ಪುಟಗಳ ಬೃಹತ್ ಕಾದಂಬರಿ ಅದು. ಅದನ್ನು ಓದಿ ಮುಗಿಸಿದಾಗ ನನಗೆ ಏರಿದ ಜ್ವರವೂ ಇಳಿಯಿತು. ನಾಟಕ ಕಂಪನಿ ಸೇರಬೇಕೆನ್ನುವ ಆಸೆಯೂ ಕಮರಿ ಹೋಯಿತು. ಈ ಕಾದಂಬರಿ ನನ್ನಲ್ಲಿ ನಾಟಕರಂಗದ ಬದುಕಿನ ಕುರಿತು ಭ್ರಮನಿರಸನವನ್ನು ಉಂಟು ಮಾಡಿತು ಎಂದು ಹೇಳಬಹುದು. ಆದರೆ ಈ ಕಾದಂಬರಿ ಓದಿ ಉಂಟಾದ ಲಾಭವೆಂದರೆ ನನಗೆ ಅ.ನ.ಕೃ. ಅವರ ಸಾಹಿತ್ಯದಲ್ಲಿ ಆಸಕ್ತಿ ಮೂಡಿದ್ದು. ಅಂದಿನಿಂದಲೇ ನಾನು ಅ.ನ.ಕೃ. ಅಭಿಮಾನಿಯಾಗಿ ಪರಿವರ್ತಿತನಾದೆ ಎಂದು ಹೇಳಬಹುದು.